SVI ಕಲಿಯೋಣ PUBLICATION

**MULTIPLE ASSESSMENTS**

**CRITICAL BASED** | **TIME–40 MINUTES**

## ಅಭ್ಯಾಸ ಪತ್ರಿಕೆ–೩

## ಭಗತ್ ಸಿಂಗ್

ಚಿದಾನಂದಮೂರ್ತಿ. ಜಿ. ಎನ್

**ಕೆಳಗಿನ ಪ್ರತಿ ಪ್ರಶ್ನೆಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ:**

೧. ತಂದೆ ತಾಯಿಯರಿಗೆ, ಕುಟುಂಬದ ಇತರ ಸದಸ್ಯರಿಗೆ ಬಹಳ ಆತಂಕವಾಯಿತು. ಕಾರಣ
ಅ. ಬಾಲಕನು ಇನ್ನೂ ಮನೆಗೆ ಬಂದಿರಲಿಲ್ಲ ಆ. ಯುದ್ಧ ಪ್ರಾರಂಭವಾಗಿತ್ತು
ಇ. ಬಾಲಕನು ಶಾಲೆಗೆ ಹೋಗುತ್ತಿರಲಿಲ್ಲ ಈ. ಮನೆಯಲ್ಲಿ ತುಂಬಾಕಷ್ಟವಾಗಿತ್ತು

೨. "ವೀರಾಜಿ ಬಂದ... ವೀರಾಜಿ ಬಂದ.." ಎಂದು ಕೂಗಿಕೊಂಡವರು
ಅ. ಅವನ ತಂಗಿ ಆ. ಅವನ ಅಮ್ಮ ಇ. ಅವನ ಅಕ್ಕ ಈ. ಅವನ ಅಜ್ಜಿ

೩. "ಇದು ಬಹಳ ಪೂಜ್ಯನೀಯವಾದ ಮಣ್ಣು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ" ಎಂದು ಯಾರು ಯಾರಿಗೆ ಹೇಳಿದರು?
ಅ. ಅಕ್ಕ ನನ್ನ ತಮ್ಮನಿಗೆ ಹೇಳಿದಳು ಆ. ತನ್ನ ಪುಟ್ಟ ತಂಗಿ ಅಣ್ಣ ಹೇಳಿದನು
ಇ. ಅಮ್ಮ ತನ್ನ ಮಗನಿಗೆ ಹೇಳಿದಳು ಈ. ಬಾಲಕ ಬಲಕಿಗೆ ಹೇಳಿದನು.

೪. ೧೯೧೯ರ ಏಪ್ರಿಲ್ ೧೩ರಂದು ಜಲಿಯನ್ ವಾಲಾಬಾಗ್‌ನಲ್ಲಿ ಸಂಘಟಿಸಿದ್ದ ಸಭೆ
ಅ. ಕ್ರಾಂತಿಕಾರಕ ಸಭೆ ಆ. ಹೋರಾಟದ ಸಭೆ
ಇ. ಶಾಂತಿಯುತ ಸಭೆ ಈ. ರೈತರ ಸಭೆ

೫. ೪೦೦ಜನ ಕೊಲ್ಲಲ್ಪಟ್ಟರು, ೧೨೦೦ಕ್ಕೂ ಹೆಚ್ಚು ಜನ ಗಾಯಗೊಂಡರು
ಅ. ಗೋದ್ರಾ ಹತ್ಯಾಕಾಂಡದಲ್ಲಿ ಆ. ಮಣಿಪುರದ ಹತ್ಯಾಕಾಂಡದಲ್ಲಿ
ಇ. ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಈ. ಹಲಗಲಿಯ ಹತ್ಯಾಕಾಂಡದಲ್ಲಿ

೬. ಆಮೃತಸರದಲ್ಲಿ ಪೊಲೀಸರ ಕಣ್ಣು ತಪ್ಪಿಸಿ ಜಲಿಯನ್ ವಾಲಾಬಾಗ್ ತಲುಪಿದರು
ಅ. ಬಾಲಕ ಭಗತ್‌ಸಿಂಗ್ ಆ. ಬಾಲಕ ರಾಜಗುರು
ಇ. ಬಾಲಕ ಸುಖ್‌ದೇವ್ ಈ. ಬಾಲಕ ವಿಕ್ರಾಂತ್ ಸೆಟ್ಟಿ

೭. ಜಲಿಯನ್ ವಾಲಾಬಾಗ್ ಮಾರಣಹೋಮ ಭಗತ್‌ಸಿಂಗ್‌ಮ ಮನಸ್ಸಿನಲ್ಲಿ
ಅ. ಅಚ್ಚಳಿಯದ ಪ್ರಭಾವ ಬೀರಲಿಲ್ಲ ಆ. ಅಚ್ಚಳಿಯದ ಪ್ರಭಾವ ಬೀರಿತ್ತು
ಇ. ಅಚ್ಚಳಿಯದ ಪ್ರಭಾವ ಮಾಸಿತು ಈ. ಅಚ್ಚಳಿಯದ ಪ್ರಭಾವ ಬರೆಯಿತು

೮. ಲೆಫ್ಟಿನಂಟ್ ಗೌರ್ನರ್ ಜನರಲ್ ಡಯರ್ ________
ಅ. ಮೃದು ಹೃದಯದ ಅಧಿಕಾರಿ ಆ. ಕಠೋರ ಹೃದಯದ ಅಧಿಕಾರಿ
ಇ. ಪ್ರಾಮಾಣಿಕ ಅಧಿಕಾರಿ ಈ. ಒಳ್ಳೆಯ ಹೃದಯದ ಅಧಿಕಾರಿ

೯. ಭಗತ್‌ಸಿಂಗ್‌ರು ನೀಡಿದ ಘೋಷಣೆ
ಅ. "ಇಂಕ್ವಿಲಾಲ್ ಜಿಂದಾಬಾದ್" ಆ. "ಸ್ವಾತಂತ್ರ್ಯ ನನ್ನ ಅಜನ್ಮಸಿದ್ಧ ಹಕ್ಕು"
ಇ " ಬ್ರಿಟೀಷ್‌ರೇ ಭಾರತವನ್ನು ಬಿಟ್ಟು ತೊಲಗಿ" ಈ. " ಮಾಡು ಇಲ್ಲವೇ ಮಡಿ"

೧೦. ಸಾವಿರಾರು ಭಾರತೀಯರು ತಮ್ಮ ಪ್ರಾಣವನ್ನು ತ್ಯಾಗ ಮಾಡಿ ವೀರ ಬಲಿದಾನ ಮಾಡಿದ್ದು
ಅ. ಭಾರತವನ್ನು ವಿಮೋಚನೆಗೊಳಿಸಲು ಆ. ಭಾರತವನ್ನು ನಿರ್ಮಿಸಲು
ಇ. ೧ನೇ ಮಹಾಯುದ್ಧ ಮಾಡಲು ಈ. ತಮ್ಮ ಸ್ವಾರ್ಥವನ್ನು ಕಾಪಾಡಲು

೧೧. ೧೯೧೯ರ ಏಪ್ರಿಲ್ ೧೩ ರಂದು ಶಾಂತಿಯುತ ಸಭೆ ಸಂಘಟಿಸಿದ್ದ ______
ಅ. ಜಲಿಯನ್ ವಾಲಾಬಾಗ್‌ನಲ್ಲಿ ಆ. ಅಮೃತಸರದಲ್ಲಿ
ಇ. ಲಾಲಾಬಾಗ್‌ನಲ್ಲಿ ಈ. ರೈಲು ನಿಲ್ದಾಣದ ಬಳಿ

೧೨. ಶಾಂತಿಯುತ ಸಭೆಯ ಮೇಲೆ ದಾಳಿ ಮಾಡಲು ಆದೇಶದ ವ್ಯಕ್ತಿ –
ಅ. ಜನರಲ್ ಢಮಾರ್ ಆ. ಕರ್ನಲ್ ಹೇನ್ರಿ
ಆ. ಜನರಲ್ ಫಟಾರ್ ಇ. ಜನರಲ್ ಡಯರ್

SVI ಕಲಿಯೋಣ PUBLICATION

CRITICAL BASED | MULTIPLE ASSESSMENTS | TIME–40 MINUTES

**ಅಭ್ಯಾಸ ಪತ್ರಿಕೆ–೪** | **ಭಗತ್ ಸಿಂಗ್**

ಡಾ. ಜಿ. ರಾಮಕೃಷ್ಣ

**ಕೆಳಗಿನ ಪ್ರತಿ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧] ಜಲಿಯನ್ ವಾಲಾಬಾಗ್‌ನಲ್ಲಿ ಸುಮಾರು __________ಅಮಾಯಕ ಭಾರತೀಯರು ಹುತಾತ್ಮರಾಗಿದ್ದರು.
ಅ. ೧೦೦೦ ಆ. ೩೦೦೦ ಇ. ೪೦೦೦ ಈ ೨೦೦೦

೨] ಜಲಿಯನ್ ವಾಲಾಬಾಗ್‌ನಲ್ಲಿ ಬ್ರಿಟಿಷ ಅಧಿಕಾರಿಯಾದ __________ ಪೈಶಾಚಿಕ ಕೃತ್ಯ ಎಸಗಿದ.
ಅ. ಜನರಲ್ ಡಯರ್ ಆ. ಜನರಲ್ ಹೆಬಲಕ್ ಇ. ಜನರಲ್ ಕೇಂಬ್ರಿಡ್ಜ್ ಈ. ಜನರಲ್ ಎಲಿಜೆಬೆತ್

೩] ಜಲಿಯನ್ ವಾಲಾಬಾಗ್ ಘಟನೆ ನಡೆದದ್ದು ಯಾವ ಇಸ್ವಿಯಲ್ಲಿ.
ಅ. ೧೯೨೦ ಆ. ೧೯೨೩ ಇ. ೧೯೧೯ ಈ. ೧೯೪೦

೪] ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನನ್ನು ಸೂಚಿಸುತ್ತದೆ?
ಅ. ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡವರ ತ್ಯಾಗ ಆ. ಜನರಲ್ ಹೆಬಲಕ್‌ನ ಪಾಪಕೃತ್ಯ
ಇ. ಭಗತ್ ಸಿಂಗ್‌ನ ಕೋಪದ ಪ್ರತೀಕ ಈ. ಭಗತ್ ಸಿಂಗ್‌ನ ಹೋರಾಟ

೫] ೨೦೦೦ ಮುಗ್ಧ __________ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ.
ಅ. ಹಿಂದೂ, ಸಿಖ್ ಮತ್ತು ಹಿಂದು ಆ. ಹಿಂದೂ, ಸಿಖ್ ಮತ್ತು ಜೈನ್
ಇ. ಹಿಂದೂ, ಸಿಖ್ ಮತ್ತು ಇಸ್ಲಾಂ ಈ. ರೈತರು, ವ್ಯಾಪಾರಸ್ಥರು ಮತ್ತು ಮುಗ್ಧರು

೬] ಜಲಿಯನ್ ವಾಲಾಬಾಗ್‌ನಲ್ಲಿ ಮೂಕನಂತೆ ಅಲೆಯುತ್ತಿದ್ದ ಬಾಲಕ ..............
ಅ. ರಾಜಗುರು ಆ. ಶಾನುಭೋಗರು ಇ. ಭಗತ್‌ಸಿಂಗ್ ಈ. ಭಟುಕೇಶ್ವರದತ್ತ

೭] ಜಲಿಯನ್ ವಾಲಾಬಾಗ್‌ನಿಂದ ಭಗತ್ ಸಿಂಗ್ ಡಬ್ಬಿಯಲ್ಲಿ ಶೇಖರಿಸಿಕೊಂಡು ಬಂದಿದ್ದು __________
ಅ. ಊಟವನ್ನು ಆ. ರಕ್ತಸಿಕ್ತ ಮಣ್ಣು ಇ. ಹಣವನ್ನು ಈ. ಕೋಪವನ್ನು

೮] ಅಮೃತಸರಕ್ಕೆ ಬಂದಿದ್ದ ಬಾಲಕ ಭಗತ್‌ಸಿಂಗ್‌ನ ಕೈಯಲ್ಲಿ ಏನಿದ್ದವು ?
ಅ. ಮಾವಿನ ಹಣ್ಣುಗಳು ಆ. ಒಂದೆರಡು ಪುಸ್ತಕಗಳು ಹಾಗೂಪುಟ್ಟ ಡಬ್ಬಿ ಇದ್ದ ಕೈಚೀಲ
ಇ. ಒಂದೆರಡು ಬಟ್ಟೆಗಳು ಹಾಗೂ ಹಣ ಇದ್ದ ಕೈಚೀಲ ಈ. ಧ್ವಜ ಮತ್ತು ಲಾಠಿ

೯] ಬಾಲಕ ಭಗತ್ ಸಿಂಗ್ ತನ್ನ ಸಹೋದರಿಗೆ ತೋರಿಸಿದ ಮಣ್ಣು __________
ಅ. ನೀರಿನಲ್ಲಿ ಕಲಿಸಿದಂತಿತ್ತು ಆ. ರಕ್ತದಲ್ಲಿ ಕಲಿಸಿದಂತಿತ್ತು
ಇ. ಹಾಲುತುಪ್ಪದಲ್ಲಿ ಕಲಿಸಿದಂತಿತ್ತು ಈ. ಬಣ್ಣಬಣ್ಣದಲ್ಲಿ ಕಲಿಸಿದಂತಿತ್ತು

೧೦] ಜಲಿಯನ್ ವಾಲಾಬಾಗ್ ಪ್ರದೇಶ ಪಾವನವಾಗಿರುವುದು
ಅ) ಸ್ವಾತಂತ್ರ್ಯ ಮತ್ತು ದೇಶಪ್ರೇಮದ ಹಣತೆಯಿಂದ ಆ) ತ್ಯಾಗ ಬಲಿದಾನಗಳಿಂದ
ಇ) ಅಮೃತಶಿಲೆಯ ಸ್ಮಾರಕಗಳಿಂದ ಈ) ಮುಗ್ದ ಹಿಂದೂ,ಸಿಖ್ ಮುಸಲ್ಮಾನರ ಸಮ್ಮಿಳಿತ ರಕ್ತದಿಂದ

೧೧] ಭಗತ್‌ಸಿಂಗ್ ಬ್ರಿಟಿಷ್ ಸರ್ಕಾರದ ವಿರುದ್ಧ ಸೇಡು ತೀರಿಸಿಕೊಂಡುದರ ಪರಿಣಾಮ __________
ಅ. ಪರಮವೀರ ಚಕ್ರ ಪಡೆದುದು ಆ. ಭಾರತ ರತ್ನ ಪ್ರಶಸ್ತಿ ದೊರೆಯಿತು
ಇ. ಮರಣದಂಡನೆಗೆ ಗುರಿಯಾದುದು ಈ. ಪ್ರಥಮ ಪ್ರಧಾನಮಂತ್ರಿಯಾದುದು.

೧೨] ೧೯೧೯ರಲ್ಲಿ ಜಲಿಯನ್‌ವಾಲಾಬಾಗ್‌ನಲ್ಲಿ ಹಾರಿದ ಗುಂಡುಗಳ ಸಂಖ್ಯೆ__________
ಅ. ೧೬೫೦. ಆ. ೨೦೨೨ ಇ. ೧೦೦ ಈ. ೧೧೧೧೧

೧೩] ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ ಎಂದು ಹೇಳಿದವರು ______
ಅ. ಜನರಲ್ ರಾಜದೀಪ್ ಆ. ಜನರಲ್ ಢಮಾರ್
ಇ. ಜನರಲ್ ಡಯರ್ ಈ. ಭಗತ್ ಸಿಂಗ್

೧೩] ತನ್ನ ಗೆಳೆಯರೊಂದಿಗೆ ಭಗತ್ ಸ್ವತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ __________
ಅ. ಅಮರನಾದನು ಆ. ಜಯಶಾಲಿಯಾದನು ಇ. ಅಧಿಕಾರಿಯಾದನು ಈ. ಸೇವಕನಾದನು

೧೪] ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡಿದ್ದ ಬಾಲಕ –
ಅ. ಭಗತ್‌ಸಿಂಗ್ ಆ. ಭಗತ್‌ರಾಮ್ ಇ. ಡಯರ್ ಡಾಮ್ ಈ. ರಾಜಗುರು

೧೫] ವೀರಯೋಧ ಭಗತ್‌ಸಿಂಗ್‌ನ ಸಹಚರರು______
ಅ. ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತ. ಆ. ರಾಮ್‌ದೇವ್, ರಾಜ್‌ಸೆಟ್ಟಿ, ಭಟುಕೇಶ್ವರ ದತ್ತ
ಇ. ಕಷ್ಟದೇವ್, ರಾಜ್‌ಸಿಂಗ್, ಭಟುಕೇಶ್ವರಶರ್ಮ. ಈ. ರಾಮ್‌ದೇವ್, ರಾಜ್‌ವರ್ಮ, ಭಟುಕೇಶ್ವರ

## ೩. ಭಗತ್‌ಸಿಂಗ್

**ಶ್ರೀ ಚಿದಾನಂದಮೂರ್ತಿ**

**ಪ್ರಶ್ನೆಗಳಿಗೆ ಉತ್ತರಿಸಿರಿ:–**

**೧. ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?**

ಉತ್ತರ: ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆಯು ೧೯೧೯ ಏಪ್ರಿಲ್ ೧೩ ರಂದು ನಡೆಯಿತು.

**೨. ಭಗತ್‌ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ?**

**ಉತ್ತರ:** ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಗಂಭೀರ ಧ್ವನಿಯಲ್ಲಿ ಹೇಳಿ ಊಟದ ಡಬ್ಬದಲ್ಲಿದ್ದ, ರಕ್ತದಲ್ಲಿ ತೊಯ್ದ ಮಣ್ಣನ್ನು ಹೊರತೆಗೆದ. "ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ" ಎಂದು ಹೇಳಿದನು.

**೩. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?**

ಉತ್ತರ: ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಕಠೋರ ಹೃದಯದ ಅಧಿಕಾರಿ ಲೆಫ್ಟಿನಂಟ್ ಗೌರ್ನರ್ ಜನರಲ್ ಡಯರ್.

**೪. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**

ಉತ್ತರ: ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರ 'ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆಂದೂ, ಆಗ ಕ್ರೂರ ಬ್ರಿಟೀಷ್ ಆಳ್ವಿಕೆ ಅಂತ್ಯವಾಗುತ್ತದೆ.'

**೫. ಭಗತ್‌ಸಿಂಗ್‌ನ ತಮದೆ ತಾಯಿಯರ ಹೆಸರೇನು?**

ಉತ್ತರ: ಭಗತ್‌ಸಿಂಗ್ ತಂದೆ ಕಿಶನ್‌ಸಿಂಗ್, ತಾಯಿ ವಿದ್ಯಾವತಿ. ೧೯೦೭ರ ಸೆಪ್ಟಂಬರ್೨೮ ರಂದು ಪಂಜಾಬಿನ ಲಾಯಲಪುರ ಜಿಲ್ಲೆಯ ಬಂಗಾ ಗ್ರಾಮದಲ್ಲಿ ಜನಿಸಿದರು.

**೬. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಬಗ್ಗೆ ಬರೆಯಿರಿ:**

ಉತ್ತರ: ೧೯೧೯ರ ಏಪ್ರಿಲ್ ೧೩ ರಂದು ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ ಸಂಘಟಿಸಿದ್ದರು. ಸುಮಾರು ಇಪ್ಪತ್ತು ಸಾವಿರ ಜನರಿದ್ದ ಆ ಸಭೆಯಲ್ಲಿ ಅಮಾಯಕರಾದ, ನಿಶ್ಯಸ್ತ್ರರಾದ ಗಂಡಸರು, ಹೆಂಗಸರು, ಮುದುಕರು ಮಕ್ಕಳು ಎಲ್ಲ ಇದ್ದರು. ಅಲ್ಲಿದ್ದ ಜನರಿಗೆ ಯಾವ ಎಚ್ಚರಿಕೆಯನ್ನೂ ಕೊಡದೆ ಜನರಲ್ ಡಯರ್ ತನ್ನ ಸೈನಿಕರಿಗೆ ಗುಂಡಿನ ದಾಳಿ ನಡೆಸಲು ಆಜ್ಞೆ ನೀಡಿದ, ಈ ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ೪೦೦ ಜನ ಕೊಲ್ಲಲ್ಪಟ್ಟರು. ೧೨೦೦ಕ್ಕೂ ಹೆಚ್ಚು ಜನ ಗಾಯಗೊಂಡರು.

## ಭಗತ್ ಸಿಂಗ್

ಡಾ.ಜಿ. ರಾಮಕೃಷ್ಣ

**ಪ್ರಶ್ನೆಗಳಿಗೆ ಉತ್ತರಿಸಿರಿ:–**

**೧] ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಎಂದು ನಡೆಯಿತು?**

ಉತ್ತರ:– ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಏಪ್ರಿಲ್ ೧೩,೧೯೧೯ ರಂದು ನಡೆಯಿತು.

**೨] ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?**

ಉತ್ತರ:– ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು 'ತ್ಯಾಗದ ಪ್ರತೀಕ ಮಣ್ಣು' ಎಂದು ತೋರಿಸಿದನು.

**೩] ಜಲಿಯನ್ ವಾಲಾಭಾಗ್‌ನಲ್ಲಿರುವ ಒಕ್ಕಣೆ ಏನು?**

ಉತ್ತರ:– ಜಲಿಯನ್ ವಾಲಾಭಾಗ್‌ನಲ್ಲಿರುವ ಒಕ್ಕಣೆ 'ಏಪ್ರಿಲ್ ೧೯.೧೯೧೯ ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು ೨೦೦೦ ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನ್ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ'.

**೪] ಭಗತ್‌ಸಿಂಗ್‌ನ ಸಹಚರರು ಯಾರು?**

ಉತ್ತರ:– ಭಗತ್‌ಸಿಂಗ್‌ನ ಸಹಚರರು ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತ.

**೫] ಭಗತ್‌ಸಿಂಗ್ ಹುತಾತ್ಮನಾದದ್ದು ಯಾವಾಗ?**

ಉತ್ತರ:– ಭಗತ್ ಸಿಂಗ್ ಹುತಾತ್ಮನಾದದ್ದು ಮಾರ್ಚ್೨೩,೧೯೩೧ರಲ್ಲಿ. ಅವರನ್ನು ಲಾಹೋರ್ ಕೇಂದ್ರ ಕಾರಾಗೃಹದಲ್ಲಿ ನೇಣು ಹಾಕಲಾಯಿತು.